<u>ಇ ಸಿ ಎ ನಂ.04/2022</u>
<u>ಪಿಡಬ್ಲ್ಯೂ 01</u>

ದಿನಾಂಕಃ 16.01.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

<u>ಪಾಟೀಸವಾಲುಃ 1 ನೇ ಎದುರುದಾರರ ಪರ ವಕೀಲರಿಂದಃ</u>

ನಾನು ಆಸ್ಪತ್ರೆಯಲ್ಲಿ 1 ವರೆ ತಿಂಗಳು ಇದ್ದೆ. ಬಿಲ್ 6 ಲಕ್ಷವಾಗಿದ್ದು, ನಾನೇ ತುಂಬಿದ್ದೇನೆ. ಪೋಲಿಸ್‌ರಿಗೆ ದೂರು ಅಪಘಾತವಾಗಿದ್ದ ದಿವಸವೇ ನಮ್ಮ ಮನೆಯವರು ದೂರು ಕೊಟ್ಟಿದ್ದಾರೆ. ವಕೀಲರಿಗೆ ಕೇಸು ಹಾಕಲು 2 ವರ್ಷಗಳ ನಂತರ ತಿಳಿಸಿದ್ದೇನೆ. ವಕೀಲರಿಗೆ ನೋಟಿಸ್ ಕೊಡಲು ಹೇಳಿಲ್ಲ. ಈ ಪ್ರಕರಣ ಯಾವಾಗ ದಾಖಲು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

<u>ಪಾಟೀಸವಾಲುಃ 3 ರಿಂದ 6 ನೇ ಎದುರುದಾರರ ಪರ ವಕೀಲರಿಂದಃ</u>

ಕೇಸು ದಾಖಲು ಮಾಡಲು ಕಾಗದ ಪತ್ರಗಳನ್ನು ದಿಃ06.07.2021 ರಂದು ತೆಗೆಸಿದ್ದೇನೆ ಎಂದರೆ ಸರಿ. ನಾನು ಆಸ್ಪತ್ರೆಯಲ್ಲಿದ್ದಾಗ ಪರಿಹಾರ ಕೊಡಿ ಎಂದು 3 ರಿಂದ 6 ನೇ ಎದುರುದಾರರನ್ನು ಸಹ ಕೇಳಿದ್ದೇನೆ. 2019 ರಲ್ಲಿ ಅಪಘಾತವಾಗಿದ್ದು ಎಂದರೆ ಸರಿ. ನಾನು 3 ವರ್ಷ ತಡಮಾಡಿದ್ದೇನೆ ಎಂದರೆ ಸರಿ. ಈ ರೀತಿ 3 ರಿಂದ 6 ನೇ ಎದರುದಾರರು ನನಗೆ ಪರಿಹಾರ ಕೊಡುತ್ತೇನೆ ಎಂದು ಹೇಳುತ್ತಾ ಬಂದಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ಎಷ್ಟು ವರ್ಷಗಳ ಒಳಗೆ ಪ್ರಕರಣ ದಾಖಲಿಸಿಬೇಕೆಂದು ವಕೀಲರು ನನಗೆ ಹೇಳಿಲ್ಲ.

7 ನೇ ಎದುರುದಾರರು ಮತ್ತು ಅವರ ಪರ ವಕೀಲರು ಗೈರು ಹಾಜರು ಇದ್ದು, ಪಾಟೀಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು. 2 ನೇ ಎದುರುದಾರರ ಪರ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಕೆ ಎಮ್ ಶಂಕರ್)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ